19-7-2026
UDAYAVANI - MANIPAL

## ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ

# ಹೃದಯ ಸ್ತಂಭನಕ್ಕೆ ಒಳಗಾಗಿದ್ದ ವ್ಯಕ್ತಿಗೆ ಎಕ್ಮೋ ಚಿಕಿತ್ಸೆ; ನರವೈಜ್ಞಾನಿಕ ಹಾನಿಯಿಲ್ಲದೆ ರೋಗಿ ಬಿಡುಗಡೆ



ಮಣಿಪಾಲ, ಜು. 18: ತಮ್ಮ ನಿವಾಸದಲ್ಲಿ ಹಠಾತ್ ಹೃದಯ ಸ್ತಂಭನಕ್ಕೆ ಒಳಗಾಗಿ ಕುಸಿದು ಬಿದ್ದ ವ್ಯಕ್ತಿಯೊಬ್ಬರು ಕೆಎಂಸಿ ಆಸ್ಪತ್ರೆಯಲ್ಲಿ ಯಾವುದೇ ನರವೈಜ್ಞಾನಿಕ ಹಾನಿ ಇಲ್ಲದೇ ಗುಣಮುಖರಾಗಿದ್ದಾರೆ.

ಅವರು ಕುಸಿದು ಬಿದ್ದಾಗ ಅದೇ ಪರಿಸರದಲ್ಲಿದ್ದ ಕೆಎಂಸಿಯ ವೈದ್ಯರು ಕೂಡಲೇ ಸಿಪಿಆರ್ ಆರಂಭಿಸಿ, ನಿವಾಸದಲ್ಲೇ ಇಂಟ್ಯುಬೇಶನ್‌ಮಾಡಿ, ತುರ್ತು ವಿಭಾಗಕ್ಕೆ ಸ್ಥಳಾಂತರಿಸಲಾಯಿತು. ಆಸ್ಪತ್ರೆಗೆ ಸಾಗಿಸುವಾಗಲೂ ಎದೆಯ ಒತ್ತಡವನ್ನು (ಸಿಪಿಆರ್) ಮುಂದುವರಿಸಿದರು. ಹಲವು ಬಾರಿ ಡಿಫಿಬ್ರಿಲೇಟರ್ ಶಾಕ್ ನೀಡಿದ ಬಳಿಕ, ರಕ್ತ ಪರಿಚಲನೆ ಮರಳಿತು.

ಹೃದಯವು ರಕ್ತ ಪರಿಚಲನೆಯನ್ನು ಸ್ವತಃ ನಿಭಾಯಿಸುವ ಸ್ಥಿತಿಯಲ್ಲಿರಲಿಲ್ಲ, ಹೃದಯ ಮತ್ತು ಶ್ವಾಸಕೋಶಗಳ ಕೆಲಸ ತಾನೇ ನಿರ್ವಹಿಸುವ ವೀನೋ ಆರ್ಟೀರಿಯಲ್ ಎಕ್ಮೋ ವ್ಯವಸ್ಥೆಯನ್ನು 30 ನಿಮಿಷಗಳೊಳಗೆ ಹೃದಯ ಮತ್ತು ಎದೆಗೂಡು ಶಸ್ತ್ರಚಿಕಿತ್ಸಾ ವಿಭಾಗವು ಅಳವಡಿಸಿತು. 36 ಗಂಟೆಗಳ ಬಳಿಕ ಅವರನ್ನು ಎಕ್ಮೋದಿಂದ ಹೊರತಂದು ಎಕ್ಸ್‌ಟ್ಯುಬೇಶನ್ ಮಾಡಲಾಯಿತು. ಯಾವುದೇ ನರವೈಜ್ಞಾನಿಕ ಹಾನಿ ಆಗದಿರುವುದು ಪರೀಕ್ಷೆಯಲ್ಲಿ ದೃಢಪಟ್ಟಿತು. ಇಂಪ್ಲಾಂಟಬಲ್ ಕಾರ್ಡಿಯೋವರ್ಟರ್‌ಡಿಫಿಬ್ರಿಲೇಟರ್ ಅಳವಡಿಕೆಗಾಗಿ ಅವರನ್ನು ಹೃದ್ರೋಗ ವಿಭಾಗಕ್ಕೆ ವರ್ಗಾಯಿಸಲಾಯಿತು.

ವಿಭಾಗದ ಕನ್ಸಲ್ಟೆಂಟ್ ಡಾ। ಶ್ಯಾಮ್ ಕೆ. ಅಶೋಕ್, ಇಲ್ಲಿ ಎಲ್ಲವೂ ಸಮಯದ ಮೇಲೆ ನಿಂತಿತ್ತು. ಕುಸಿದ ಕ್ಷಣಾರ್ಧದಲ್ಲಿ ಪ್ರಾರಂಭಿಸಿದ ಎದೆಯ ಸಂಕೋಚನದಿಂದ ಮಿದುಳಿನ ಹಾನಿಯಿಲ್ಲದೆ ಗುಣಮುಖರಾದರು. ಸುಸಜ್ಜಿತ ಶಸ್ತ್ರಚಿಕಿತ್ಸ ಕೊಠಡಿ, ಎಕ್ಮೋ ಸರ್ಕ್ಯೂಟ್‌ಮತ್ತು ತಜ್ಞರ ತಂಡಗಳು ದಿನವಿಡೀ ಲಭ್ಯವಿದ್ದ ಕಾರಣ 30 ನಿಮಿಷಗಳೊಳಗೆ ಅವರನ್ನುಎಕ್ಮೋಗೆ ಸೇರಿಸಲು ಸಾಧ್ಯವಾಯಿತು ಎಂದರು.

ಸಾಮಾನ್ಯವಾಗಿ ಆಸ್ಪತ್ರೆಯ ಹೊರಗೆ ಸಂಭವಿಸುವ ಹೃದಯ ಸ್ತಂಭನದ ಪ್ರಕರಣಗಳಲ್ಲಿ ದೇಶದಲ್ಲಿ ಮರಣ ಪ್ರಮಾಣ ಶೇ. 90ಕ್ಕೂ ಹೆಚ್ಚಿದೆ. ತತ್ ಕ್ಷಣವೇ ಸಿಪಿಆರ್ ನೀಡಲು ತಿಳಿದಿರುವವರು ಜನಸಂಖ್ಯೆಯಲ್ಲಿ ಕೇವಲ ಶೇ. 5 ಮಂದಿಗೆ ಮಾತ್ರ ಎಂಬುದೇ ಇದಕ್ಕೆ ಪ್ರಮುಖ ಕಾರಣ ಎಂದು ತಿಳಿಸಿದರು.

ಮಾಹೆ ಮಣಿಪಾಲದ ಬೋಧನ ಆಸ್ಪತ್ರೆಗಳ ಸಿಒಒ ಡಾ। ಸುಧಾಕರ್ ಕಂಟಿಪುಡಿ ಮಾತನಾಡಿ, ಜೀವ ಉಳಿಸಲು ಇಡೀ ವ್ಯವಸ್ಥೆ ಒಂದೇ ಘಟಕವಾಗಿ ಕಾರ್ಯನಿರ್ವಹಿಸುವ ಬಗೆ ಇದು ಎಂದು ತಿಳಿಸಿ, ವೈದ್ಯರ ಸಾಧನೆಯನ್ನು ಶ್ಲಾಘಿಸಿದರು.

ಸಿಟಿವಿಎಸ್ ವಿಭಾಗದ ಡಾ। ಶ್ಯಾಮ್ ಕೆ. ಅಶೋಕ್, ಡಾ। ವಿಜಯ್ ಕುಮಾರ್, ಡಾ। ಸಾಯಿ, ಡಾ। ಗಣೇಶ್ ಕಾಮತ್ ಮತ್ತು ಡಾ। ಶುಭಂ ಅವರು ಮಣಿಪಾಲ್ ಕಾಲೇಜ್ ಆಫ್ ಹೆಲ್ತ್ ಪ್ರೊಫೆಶನ್ಸ್‌ನ ಪರ್ಫ್ಯೂಶನಿಸ್ಟ್ ಹಲೀಶ್ ತಂಡದಲ್ಲಿದ್ದರು.

ವಿಜಯವಾಣಿ

ಶನಿವಾರ 18 ಜುಲೈ 2026
18 JULY 2026

# ಹೃದಯ ಸ್ತಂಭನಕ್ಕೆ ಒಳಗಾಗಿದ್ದಾತಗೆ ಎಕ್ಮೋ ಚಿಕಿತ್ಸೆ



ಹೃದಯ ಸ್ತಂಭನಕ್ಕೆ ಒಳಗಾಗಿದ್ದ ವ್ಯಕ್ತಿಗೆ ಯಶಸ್ವಿ ಎಕ್ಮೋ ಚಿಕಿತ್ಸೆ ನಡೆಸಿದ ವೈದ್ಯರ ತಂಡ.

**ಉಡುಪಿ:** ಹಠಾತ್ ಹೃದಯ ಸ್ತಂಭನಕ್ಕೆ ಒಳಗಾಗಿ ಸಾವು ಬದುಕಿನ ನಡುವೆ ಹೋರಾಡುತ್ತಿದ್ದವರಿಗೆ ಕಸ್ತೂರ್ಬಾ ಆಸ್ಪತ್ರೆಯ ವೈದ್ಯರ ಸಕಾಲಿಕ ಸ್ಪಂದನೆ ಮತ್ತು ಅತ್ಯಾಧುನಿಕ 'ಎಕ್ಮೋ' ಚಿಕಿತ್ಸೆಯಿಂದಾಗಿ ಪುನರ್ಜನ್ಮ ಸಿಕ್ಕಿದೆ.

ತೀವ್ರ ಸ್ವರೂಪದ ಹೃದಯ ಸ್ತಂಭನಕ್ಕೆ ಒಳಗಾಗಿದ್ದ ರೋಗಿ, ಯಾವುದೇ ರೀತಿಯ ನರವೈಜ್ಞಾನಿಕ ಅಥವಾ ಮಿದುಳಿನ ಹಾನಿಯಿಲ್ಲದೆ ಸಂಪೂರ್ಣ ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ.

49 ವರ್ಷದ ರೋಗಿ ತಮ್ಮ ನಿವಾಸದಲ್ಲಿ ಹಠಾತ್ ಹೃದಯ ಸ್ತಂಭನಕ್ಕೆ ಒಳಗಾಗಿ ಕುಸಿದು ಬಿದ್ದಿದ್ದರು. ಅದೃಷ್ಟವಶಾತ್ ವೈದ್ಯರೊಬ್ಬರು ಅದೇ ಪರಿಸರದಲ್ಲಿ ವಾಸ್ತವ್ಯದಲ್ಲಿದ್ದು, ಕ್ಷಣಾರ್ಧದಲ್ಲಿ ಕಾರ್ಯಪ್ರವೃತ್ತರಾಗಿ ಸಿಪಿಆರ್ ಆರಂಭಿಸಿದರು. ಅಲ್ಲಿಂದ ಆಸ್ಪತ್ರೆಯ ತುರ್ತು ವಿಭಾಗಕ್ಕೆ ಸಾಗಿಸುವ ದಾರಿಯುದ್ದಕ್ಕೂ ಸಿಪಿಆರ್ ಮುಂದುವರಿಸಲಾಗಿತ್ತು. ಆಸ್ಪತ್ರೆಯಲ್ಲಿ ಹಲವು ಬಾರಿ ಡಿಫಿಬ್ರಿಲೇಟರ್ ಶಾಕ್ ನೀಡಲಾಯಿತು. ಒಂದು ಗಂಟೆ ಬಳಿಕ ರೋಗಿಯಲ್ಲಿ ರಕ್ತ ಪರಿಚಲನೆ ಮರಳಿತು.

**30 ನಿಮಿಷಗಳಲ್ಲಿ ಎಕ್ಮೋ ಚಿಕಿತ್ಸೆ:** ರೋಗಿಯ ಎರಡೂ ಶ್ವಾಸಕೋಶಗಳು ಪಲ್ಮನರಿ ಎಡಿಮಾದಿಂದ ತೊಂದರೆಗೊಳಗಾಗಿದ್ದವು. ಹೃದಯವು ರಕ್ತ ಪರಿಚಲನೆಯನ್ನು ಸ್ವತಃ ನಿಭಾಯಿಸುವ ಸ್ಥಿತಿಯಲ್ಲಿರಲಿಲ್ಲ. ತಕ್ಷಣವೇ ಕಾರ್ಯಪ್ರವೃತ್ತರಾದ ಹೃದಯ ಮತ್ತು ಎದೆಗೂಡು ಶಸ್ತ್ರಚಿಕಿತ್ಸಾ ವಿಭಾಗದ ತಜ್ಞರು ಕೇವಲ 30 ನಿಮಿಷಗಳ ಒಳಗಾಗಿ ಹೃದಯ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ 'ವೀನೋ ಆರ್ಟೀರಿಯಲ್ ಎಕ್ಮೋ' ವ್ಯವಸ್ಥೆಯನ್ನು ಅಳವಡಿಸಿದರು. ಇದು ಹೃದಯ ಮತ್ತು ಶ್ವಾಸಕೋಶಗಳ ಕೆಲಸವನ್ನು ತಾನೇ ನಿರ್ವಹಿಸುತ್ತದೆ. 36 ಗಂಟೆಗಳ ಕಾಲ ಈ ವ್ಯವಸ್ಥೆಯಲ್ಲಿದ್ದ ರೋಗಿಯನ್ನು ಬಳಿಕ ಎಕ್ಮೋದಿಂದ ಹೊರತರಲಾಯಿತು. ಪರೀಕ್ಷೆ ಸಂದರ್ಭ ಅವರಿಗೆ ಯಾವುದೇ ರೀತಿಯ ಮಿದುಳಿನ ಅಥವಾ ನರವೈಜ್ಞಾನಿಕ ಹಾನಿ ಆಗದಿರುವುದು ದೃಢಪಟ್ಟಿದೆ. ಸದ್ಯ ರೋಗಿಗೆ ಇಂಪ್ಲಾಂಟಬಲ್ ಕಾರ್ಡಿಯೋವರ್ಟರ್ ಡಿಫಿಬ್ರಿಲೇಟರ್ ಅಳವಡಿಕೆಗಾಗಿ ಹೃದ್ರೋಗ ವಿಭಾಗಕ್ಕೆ ವರ್ಗಾಯಿಸಲಾಗಿದೆ.

**ತಜ್ಞರ ತಂಡದಿಂದ ಪ್ರಕ್ರಿಯೆ:** ಈ ಸಂಕೀರ್ಣ ಮತ್ತು ಯಶಸ್ವಿ ಚಿಕಿತ್ಸಾ ಪ್ರಕ್ರಿಯೆಯನ್ನು ಸಿಟಿವಿಎಸ್ ವಿಭಾಗದ ವೈದ್ಯರಾದ ಡಾ.ಶ್ಯಾಮ್ ಕೆ.ಅಶೋಕ್, ಡಾ.ವಿಜಯ್ ಕುಮಾರ್, ಡಾ.ಸಾಯಿ, ಡಾ.ಗಣೇಶ್ ಕಾಮತ್, ಡಾ.ಶುಭಂ ಮತ್ತು ಮಣಿಪಾಲ್ ಕಾಲೇಜ್ ಆಫ್ ಹೆಲ್ತ್ ಪ್ರೊಫೆಶನ್ಸ್‌ನ ಪರ್ಫ್ಯೂಷನಿಸ್ಟ್ ಹಲೀಶ್ ಅವರನ್ನೊಳಗೊಂಡ ತಂಡ ಯಶಸ್ವಿಯಾಗಿ ನಿರ್ವಹಿಸಿದೆ.

ವಿಜಯ ಕರ್ನಾಟಕ

ಭಾನುವಾರ, 19 ಜುಲೈ 2026,

# ಹೃದಯ ಸ್ತಂಭನಕ್ಕೆ ಒಳಗಾಗಿದ್ದ ವ್ಯಕ್ತಿಗೆ ಎಕ್ಮೋ ಚಿಕಿತ್ಸೆ

## ಜೀವ ಉಳಿಸಿದ ಮಣಿಪಾಲ ಆಸ್ಪತ್ರೆ



**ವಿಕ ಸುದ್ದಿಲೋಕ** ಉಡುಪಿ

ಮನೆಯಲ್ಲಿ ಹಠಾತ್ ಹೃದಯ ಸ್ತಂಭನಕ್ಕೆ ಒಳಗಾಗಿ ಕುಸಿದು ಬಿದ್ದ ವ್ಯಕ್ತಿಯೊಬ್ಬರು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಎಕ್ಮೋ ಚಿಕಿತ್ಸೆಯಿಂದ ಯಾವುದೇ ನರ ವೈಜ್ಞಾನಿಕ ಹಾನಿಯಿಲ್ಲದೆ ಸಂಪೂರ್ಣವಾಗಿ ಗುಣಮುಖರಾಗಿದ್ದಾರೆ.

ಹೃದಯ ಸ್ತಂಭನದ ಪ್ರಕರಣಗಳಲ್ಲಿ ಭಾರತ ದಲ್ಲಿ ಮರಣ ಪ್ರಮಾಣ ಶೇ.90ಕ್ಕೂ ಹೆಚ್ಚಿದೆ. ತಕ್ಷಣವೇ ಸಿಪಿಆರ್ ತಿಳಿದಿರುವವರು ಜನಸಂಖ್ಯೆಯಲ್ಲಿ ಕೇವಲ ಶೇ.5 ಮಾತ್ರವೇ ಇದಕ್ಕೆ ಪ್ರಮುಖ ಕಾರಣ.

ವ್ಯಕ್ತಿ ಕುಸಿದು ಬಿದ್ದ ಸಂದರ್ಭ ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ವೈದ್ಯರು ಆಕಸ್ಮಿಕವಾಗಿ ಅದೇ ಪರಿಸರದಲ್ಲಿದ್ದರು. ಕ್ಷಣಾರ್ಧದಲ್ಲಿ ಸಿಪಿಆರ್ ಆರಂಭಿಸಿ, ನಿವಾಸದಲ್ಲಿಯೇ ಇಂಟ್ಯುಬೇಶನ್ ಮಾಡಿದರು. ತುರ್ತು ವಿಭಾಗಕ್ಕೆ ಸ್ಥಳಾಂತರಿಸಲಾಯಿತು. ಆಸ್ಪತ್ರೆಗೆ ಸಾಗಿಸುವ ವೇಳೆಯೂ ಎದೆಯ ಒತ್ತಡವನ್ನು ಮುಂದುವರಿಸಿದರು. ಒಂದು ಗಂಟೆಯ ಬಳಿಕ ರಕ್ತ ಪರಿಚಲನೆ ಮರಳಿತು. ಎರಡೂ ಶ್ವಾಸಕೋಶಗಳು ಪಲ್ಮನರಿ ಎಡಿಮಾದಿಂದ ತುಂಬಿಕೊಂಡಿತ್ತು.

ಹೃದಯವು ರಕ್ತ ಪರಿಚಲನೆಯನ್ನು ಸ್ವತಃ ನಿಭಾಯಿಸುವ ಸ್ಥಿತಿಯಲ್ಲಿರಲಿಲ್ಲ, ಹೃದಯ ಮತ್ತು ಶ್ವಾಸಕೋಶಗಳ ಕೆಲಸ ವನ್ನು ತಾನೇ ನಿರ್ವಹಿಸುವ ವೀನೋ ಆರ್ಟೀರಿಯಲ್ ಎಕ್ಮೋ ವ್ಯವಸ್ಥೆಯನ್ನು 30 ನಿಮಿಷಗಳ ಒಳಗಾಗಿ ಹೃದಯ ಶಸ್ತ್ರ ಚಿಕಿತ್ಸಾ ಕೊಠಡಿಯಲ್ಲಿ ಹೃದಯ ಮತ್ತು ಎದೆಗೂಡು ಶಸ್ತ್ರಚಿಕಿತ್ಸಾ ವಿಭಾಗವು ಅಳವಡಿಸಿತು.

36 ಗಂಟೆಗಳ ಬಳಿಕ ಅವರನ್ನು ಎಕ್ಮೋದಿಂದ ಹೊರತರಲಾಯಿತು. ಎಕ್ಸ್‌ಟ್ಯುಬೇಶನ್ ಮಾಡಲಾಯಿತು. ಪ್ರಕರಣವನ್ನು ಸಿಟಿವಿಎಸ್ ವಿಭಾಗದ ಡಾ. ಶ್ಯಾಮ್ ಕೆ. ಅಶೋಕ್, ಡಾ.ವಿಜಯ್ ಕುಮಾರ್, ಡಾ.ಸಾಯಿ, ಡಾ.ಗಣೇಶ್ ಕಾಮತ್ ಮತ್ತು ಡಾ. ಶುಭಂ ಅವರು ಮಣಿಪಾಲ್ ಕಾಲೇಜ್ ಆಫ್ ಹೆಲ್ತ್ ಪ್ರೊಫೆಶನ್ಸ್‌ನ ಪರ್ಫ್ಯೂಷನಿಸ್ಟ್ ಹಲೀಶ್ ಜತೆಗೆ ನಿರ್ವಹಿಸಿದರು.

ಎಲ್ಲವೂ ಸಮಯದ ಮೇಲೆ ಅವಲಂಬಿತವಾಗಿತ್ತು. ಕುಸಿದ ಕ್ಷಣಾರ್ಧದಲ್ಲಿ ಪ್ರಾರಂಭವಾದ ಎದೆಯ ಸಂಕೋಚನಗಳೇ ಈ ವ್ಯಕ್ತಿ ಇಂದು ಯಾವುದೇ ಮಿದುಳಿನ ಹಾನಿಯಿಲ್ಲದೆ ತಮ್ಮ ಕುಟುಂಬದೊಂದಿಗೆ ಇರಲು ಕಾರಣ. ಸುಸಜ್ಜಿತ ಶಸ್ತ್ರಚಿಕಿತ್ಸಾ ಕೊಠಡಿ, ಎಕ್ಮೋ ಸರ್ಕ್ಯೂಟ್ ಮತ್ತು ತಜ್ಞರ ತಂಡಗಳು ದಿನದ 24 ಗಂಟೆಯೂ ಸನ್ನದ್ಧ ಸ್ಥಿತಿಯಲ್ಲಿ ಇರುವುದರಿಂದಲೇ ನಾವು 30 ನಿಮಿಷಗಳ ಒಳಗೆ ವ್ಯಕ್ತಿಯನ್ನು ಎಕ್ಮೋಗೆ ಒಳಪಡಿಸಲು ಸಾಧ್ಯವಾಯಿತು.

– **ಡಾ.ಶ್ಯಾಮ್ ಕೆ. ಅಶೋಕ್**, ಸಲಹೆಗಾರರು, ಹೃದಯ ಮತ್ತು ಎದೆಗೂಡು ಶಸ್ತ್ರಚಿಕಿತ್ಸಾ ವಿಭಾಗ, ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲ

ಜೀವ ಉಳಿಸುವ ಪ್ರಶ್ನೆ ಬಂದಾಗ ಇಡೀ ವ್ಯವಸ್ಥೆ ಒಂದೇ ಘಟಕವಾಗಿ ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂಬುದನ್ನು ಇದು ತೋರಿಸುತ್ತದೆ. ಸಾರ್ವಜನಿಕರು ಕನಿಷ್ಠ(ಬೇಸಿಕ್) ಸಿಪಿಆರ್ ಮಾಡುವುದನ್ನು ಕಲಿಯಬೇಕು. ಜನರ ಜೀವವನ್ನು ಉಳಿಸುವವರು ಯಾರು ಬೇಕಾದರೂ ಆಗಿರಬಹುದು ಎಂಬುದನ್ನು ಮರೆಯಬಾರದು

– **ಡಾ.ಸುಧಾಕರ್ ಕಂಟಿಪುಡಿ**, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಬೋಧನಾ ಆಸ್ಪತ್ರೆ ಮಾಹೆ, ಮಣಿಪಾಲ

THE TIMES OF INDIA, MANGALURU
SATURDAY, JULY 18, 2026

# Rapid CPR, ECMO save cardiac arrest patient at hospital

TIMES NEWS NETWORK

**Udupi:** A man who suffered a sudden cardiac arrest at his residence has made a full recovery with no neurological deficit at Kasturba Hospital, Manipal. Doctors from Kasturba Hospital were in the neighbourhood when he collapsed. They began CPR within seconds and intubated him at his residence. He was shifted to the emergency department with chest compressions continuing. After multiple defibrillator shocks, circulation returned at the end of nearly an hour, stated a hospital release.

Both lungs were flooded with pulmonary oedema, and the heart could not sustain circulation. The department of cardiovascular and thoracic surgery placed him on veno-arterial extracorporeal membrane oxygenation (ECMO), which takes over the work of the heart and lungs, in the cardiothoracic operation theatre within 30 minutes of the request. He was weaned off ECMO after 36 hours, extubated, and found to have no neurological deficit. He has been transferred to cardiology for an implantable cardioverter defibrillator. Dr Shyam K Ashok, consultant, department of cardiovascular and thoracic surgery, said: "Everything came down to time. The compressions that started within seconds of the collapse are the reason this gentleman is with his family today without any brain injury. We could get him on the circuit inside 30 minutes because the theatre, the circuit and the teams are kept ready around the clock."

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

Sangama 3
2[illegible] Jul 2026

# ಹೃದಯ ಸ್ತಂಭನಕ್ಕೆ ಒಳಗಾದ್ದ ವ್ಯಕ್ತಿಗೆ ಎಕ್ಮೋ ಚಿಕಿತ್ಸೆ: ಮಣಿಪಾಲ ಕೆಎಂಸಿ ಸಾಧನೆ



**ಉಡುಪಿ:** ತಮ್ಮ ನಿವಾಸದಲ್ಲಿ ಹಠಾತ್ ಹೃದಯಸ್ತಂಭನಕ್ಕೆ(ಕಾರ್ಡಿಯಾಕ್ ಆರೆಸ್ಟ್) ಒಳಗಾಗಿ ಕುಸಿದು ಬಿದ್ದಿದ್ದ ವ್ಯಕ್ತಿಯೊಬ್ಬರಿಗೆ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ವೈದ್ಯರು ಸಕಾಲದಲ್ಲಿ ಎಕ್ಮೋ ಚಿಕಿತ್ಸೆ ನೀಡಿ, ಯಾವುದೇ ನರವೈಜ್ಞಾನಿಕ ಹಾನಿಯಿಲ್ಲದೆ ಸಂಪೂರ್ಣವಾಗಿ ಗುಣಮುಖರಾಗುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಆಕಸ್ಮಿಕವಾಗಿ ಅದೇ ಪರಿಸರದಲ್ಲಿದ್ದ ಆಸ್ಪತ್ರೆಯ ವೈದ್ಯರು ತಕ್ಷಣವೇ ಸ್ಥಳದಲ್ಲೇ ಸಿಪಿಆರ್ ಆರಂಭಿಸಿ ಆಸ್ಪತ್ರೆಗೆ ದಾಖಲಿಸಿದ್ದರು. ಸತತ ಪ್ರಯತ್ನದ ಬಳಿಕ ರಕ್ತ ಪರಿಚಲನೆ ಮರಳಿತಾದರೂ, ಹೃದಯ ಮತ್ತು ಶ್ವಾಸಕೋಶಗಳು ತೀವ್ರ ನಿಶ್ಯಕ್ತಗೊಂಡಿದ್ದವು. ಈ ಹಿನ್ನೆಲೆ ಹೃದಯ ಮತ್ತು ಎದೆಗೂಡು ಶಸ್ತ್ರಚಿಕಿತ್ಸಾ ವಿಭಾಗವು ಕೇವಲ 30 ನಿಮಿಷಗಳ ಒಳಗಾಗಿ ತುರ್ತು ವಿಎ ಎಕ್ಮೋ ವ್ಯವಸ್ಥೆಯನ್ನು ಅಳವಡಿಸಿ ಜೀವ ಉಳಿಸಿದೆ. 36 ಗಂಟೆಗಳ ಬಳಿಕ ರೋಗಿಯನ್ನು ಎಕ್ಮೋದಿಂದ ಹೊರತರಲಾಗಿದ್ದು, ಯಾವುದೇ ಮಿದುಳಿನ ಹಾನಿ ಯಿಲ್ಲದೆ ಗುಣಮುಖರಾಗಿದ್ದಾರೆ. ಡಾ. ಶ್ಯಾಮ್ ಕೆ. ಅಶೋಕ್, ಡಾ. ವಿಜಯ್ ಕುಮಾರ್, ಡಾ. ಗಣೇಶ್ ಕಾಮತ್ ಸೇರಿದಂತೆ ತಜ್ಞ ವೈದ್ಯರು ಹಾಗೂ ಪರ್ಫ್ಯೂಷನಿಸ್ಟ್ ಹರೀಶ್ ಅವರ ತಂಡ ಈ ಯಶಸ್ವಿ ಚಿಕಿತ್ಸೆ ನೀಡಿದೆ ಎಂದು ಆಸ್ಪತ್ರೆ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಡಾ. ಸುಧಾಕರ್ ಕಂಟಿಪುಡಿ ತಿಳಿಸಿದ್ದಾರೆ.

ಕನ್ನಡಪ್ರಭ
ಭಾನುವಾರ 19.07.2026

# ಪ್ರತಿಯೊಬ್ಬರೂ ಕನಿಷ್ಠ ಸಿಪಿಆರ್ ವಿಧಾನ ಕಲಿಯಬೇಕು: ಡಾ. ಸುಧಾಕರ್ ಕಂಟಿಪುಡಿ



ಹೃದಯಸ್ತಂಭನವಾಗಿ ಕುಸಿದು ಬಿದ್ದ ವ್ಯಕ್ತಿಯನ್ನು ಗುಣಮುಖರನ್ನಾಗಿಸಿದ ವೈದ್ಯರ ತಂಡ.

• **ಕನ್ನಡಪ್ರಭ ವಾರ್ತೆ** ಮಣಿಪಾಲ

ಮನೆಯಲ್ಲಿ ಹಠಾತ್ ಹೃದಯಸ್ತಂಭನವಾಗಿ ಕುಸಿದು ಬಿದ್ದ ವ್ಯಕ್ತಿಯೊಬ್ಬರನ್ನು ಇಲ್ಲಿನ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಯಾವುದೇ ನರ ವೈಜ್ಞಾನಿಕ ಹಾನಿ ಇಲ್ಲದೆ ಸಂಪೂರ್ಣವಾಗಿ ಗುಣಮುಖರನ್ನಾಗಿ ಮಾಡಲಾಗಿದೆ.

ಭಾರತದಲ್ಲಿ ಆಸ್ಪತ್ರೆಯ ಹೊರಗೆ ಸಂಭವಿಸುವ ಹೃದಯ ಸ್ತಂಭನದ ಪ್ರಕರಣಗಳಲ್ಲಿ ಶೇ. 90 ಮಂದಿಗೆ ಮರಣ ಸಂಭವಿಸುತ್ತದೆ. ಈ ಸಂದರ್ಭ ಎದೆಗೆ ಒತ್ತಡ ನೀಡುವ ವಿಧಾನ (ಸಿಪಿಆರ್) ತಿಳಿದಿರುವವರು ಭಾರತದಲ್ಲಿ ಕೇವಲ ಶೇ. 5ರಷ್ಟು ಮಂದಿ ಇರುವುದೇ ಇದಕ್ಕೆ ಕಾರಣ.

ಮನೆಯಲ್ಲಿ ವ್ಯಕ್ತಿ ಕುಸಿದು ಬಿದ್ದ ಸಂದರ್ಭದಲ್ಲಿ ಕಸ್ತೂರ್ಬಾ ಆಸ್ಪತ್ರೆ ವೈದ್ಯರು ಆಕಸ್ಮಿಕವಾಗಿ ಅದೇ ಪರಿಸರದಲ್ಲಿದ್ದರು. ಅವರು ತಕ್ಷಣ ಸಿಪಿಆರ್ ಆರಂಭಿಸಿ, ನಿವಾಸದಲ್ಲೇ ಇಂಟ್ಯುಬೇಷನ್ ಮಾಡಿದರು. ನಂತರ ಅವರನ್ನು ಆಸ್ಪತ್ರೆಯ ತುರ್ತು ವಿಭಾಗಕ್ಕೆ ಸ್ಥಳಾಂತರಿಸಲಾಯಿತು. ಅಲ್ಲಿ ಡಿಫಿಬ್ರಿಲೇಟರ್ ಶಾಕ್ ನೀಡಿದ ಬಳಿಕ ಸುಮಾರು ಒಂದು ಗಂಟೆ ನಂತರ ಅವರ ದೇಹದಲ್ಲಿ ರಕ್ತ ಪರಿಚಲನೆ ಆರಂಭವಾಯಿತು.

ಹೃದಯವು ರಕ್ತ ಪರಿಚಲನೆಯನ್ನು ಸ್ವತಃ ನಿಭಾಯಿಸುವ ಸ್ಥಿತಿಯಲ್ಲಿರಲಿಲ್ಲ. ಆದ್ದರಿಂದ ಅವರಿಗೆ ಹೃದಯ ಮತ್ತು ಶ್ವಾಸಕೋಶಗಳ ಕೆಲಸವನ್ನು ಕೃತಕವಾಗಿ ನಿಭಾಯಿಸುವ ವೀನೋ ಆರ್ಟೀರಿಯಲ್ ಎಕ್ಮೋ ವ್ಯವಸ್ಥೆಯನ್ನು ಅಳವಡಿಸಲಾಯಿತು. 36 ಗಂಟೆಗಳ ಬಳಿಕ ಅವರನ್ನು ಎಕ್ಮೋದಿಂದ ಹೊರತರಲಾಯಿತು, ಅವರಲ್ಲಿ ಯಾವುದೇ ನರವೈಜ್ಞಾನಿಕ ಹಾನಿ ಆಗದಿರುವುದು ಪರೀಕ್ಷೆಯಲ್ಲಿ ದೃಢಪಟ್ಟಿತು. ನಂತರ ಇಂಪ್ಲಾಂಟಬಲ್ ಕಾರ್ಡಿಯೋವರ್ಟರ್ ಡಿಫಿಬ್ರಿಲೇಟರ್ ಅಳವಡಿಸಲಾಯಿತು.

ಹೃದಯ ಮತ್ತು ಎದೆಗೂಡು ಶಸ್ತ್ರಚಿಕಿತ್ಸಾ ವಿಭಾಗದ ಡಾ. ಶ್ಯಾಮ್ ಕೆ. ಅಶೋಕ್, ಡಾ. ವಿಜಯ್ ಕುಮಾರ್, ಡಾ. ಸಾಯಿ, ಡಾ. ಗಣೇಶ್ ಕಾಮತ್ ಮತ್ತು ಡಾ. ಶುಭ್ರೊ ಅವರು ಮಣಿಪಾಲ್ ಕಾಲೇಜ್ ಆಫ್ ಹೆಲ್ತ್ ಪ್ರೊಫೆಶನ್ಸ್‌ನ ಪರ್ಫ್ಯೂಷನಿಸ್ಟ್ ಹರೀಶ್ ಜೊತೆಗೆ ಈ ವ್ಯಕ್ತಿಗೆ ಚಿಕಿತ್ಸೆ ನಿರ್ವಹಿಸಿದರು.

ಮಾಹೆ ಮಣಿಪಾಲದ ಬೋಧನಾ ಆಸ್ಪತ್ರೆಗಳ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಡಾ. ಸುಧಾಕರ್ ಕಂಟಿಪುಡಿ ಅವರು, ಸಾರ್ವಜನಿಕರು ಕನಿಷ್ಠ ಸಿಪಿಆರ್ ಮಾಡುವುದನ್ನು ಕಲಿಯಬೇಕು. ಇಲ್ಲಿ ಪಕ್ಕದಲ್ಲಿಯೇ ಇದ್ದವರು ವೈದ್ಯರಾಗಿದ್ದರು. ಆದರೆ ಮುಂದಿನ ಜೀವವನ್ನು ಉಳಿಸುವವರು ಯಾರು ಬೇಕಾದರೂ ಆಗಿರಬಹುದು ಎಂಬುದನ್ನು ಮರೆಯಬಾರದು ಎಂದಿದ್ದಾರೆ.

ಪ್ರಜಾವಾಣಿ
ಇ-ಪೇಪರ್

## ಮಣಿಪಾಲದ ಕಸ್ತೂರಬಾ ಆಸ್ಪತ್ರೆಯಲ್ಲಿ ಚಿಕಿತ್ಸೆ, ರೋಗಿ ಗುಣಮುಖ

# ಹೃದಯ ಸ್ತಂಭನ: ವ್ಯಕ್ತಿಗೆ ಎಕ್ಮೋ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಉಡುಪಿ: ಹಠಾತ್ ಹೃದಯ ಸ್ತಂಭನಕ್ಕೆ ಒಳಗಾಗಿ ಕುಸಿದು ಬಿದ್ದಿದ್ದ ವ್ಯಕ್ತಿಯೊಬ್ಬರು ನರವೈಜ್ಞಾನಿಕ ಹಾನಿಯಿಲ್ಲದೆ ಮಣಿಪಾಲದ ಕಸ್ತೂರಬಾ ಆಸ್ಪತ್ರೆಯಲ್ಲಿ ಸಂಪೂರ್ಣವಾಗಿಗುಣಮುಖರಾಗಿದ್ದಾರೆ.

ವ್ಯಕ್ತಿಯು ಕುಸಿದು ಬಿದ್ದ ಸಂದರ್ಭದಲ್ಲಿ ಕಸ್ತೂರಬಾ ಆಸ್ಪತ್ರೆಯ ವೈದ್ಯರು ಆಕಸ್ಮಿಕವಾಗಿ ಅದೇ ಪರಿಸರದಲ್ಲಿದ್ದರು. ಅವರು ಕ್ಷಣಾರ್ಧದಲ್ಲಿ ಸಿಪಿಆರ್ ಆರಂಭಿಸಿ, ನಿವಾಸದಲ್ಲಿಯೇ ಇಂಟ್ಯುಬೇಷನ್ ಮಾಡಿದರು. ಅವರನ್ನು ತುರ್ತು ವಿಭಾಗಕ್ಕೆ ಸ್ಥಳಾಂತರಿಸಲಾಯಿತು, ಜೊತೆಗೆ ಆಸ್ಪತ್ರೆಗೆ ಸಾಗಿಸುವ ವೇಳೆಯೂ ಎದೆಯ ಒತ್ತಡವನ್ನು ಮುಂದುವರಿಸಿದರು. ಹಲವು ಬಾರಿ ಡಿಫಿಬ್ರಿಲೇಟರ್ ಶಾಕ್ ನೀಡಿದ ಬಳಿಕ, ಸುಮಾರು ಒಂದು ಗಂಟೆಯ ಕೊನೆಗೆ ರಕ್ತ ಪರಿಚಲನೆ ಮರಳಿತು ಎಂದು ಪ್ರಕಟಣೆ ತಿಳಿಸಿದೆ.



ಹಠಾತ್ ಹೃದಯ ಸ್ತಂಭನಕ್ಕೆ ಒಳಗಾದ ವ್ಯಕ್ತಿಗೆ ಚಿಕಿತ್ಸೆ ನೀಡಿದ ವೈದ್ಯರ ತಂಡ

ಎರಡೂ ಶ್ವಾಸಕೋಶಗಳು ಪಲ್ಮನರಿ ಎಡಿಮಾದಿಂದ ತುಂಬಿಕೊಂಡಿತ್ತು ಮತ್ತು ಹೃದಯವು ರಕ್ತ ಪರಿಚಲನೆಯನ್ನು ಸ್ವತಃ ನಿಭಾಯಿಸುವ ಸ್ಥಿತಿಯಲ್ಲಿರಲಿಲ್ಲ. ಹೃದಯ ಮತ್ತು ಶ್ವಾಸಕೋಶಗಳ ಕೆಲಸವನ್ನು ತಾನೇ ನಿರ್ವಹಿಸುವ ವೀನೋ ಆರ್ಟೀರಿಯಲ್ ಎಕ್ಮೋ ವ್ಯವಸ್ಥೆಯನ್ನು 30 ನಿಮಿಷಗಳ ಒಳಗಾಗಿ ಅಳವಡಿಸಲಾಗಿತ್ತು ಎಂದೂ ಹೇಳಿದೆ.

36 ಗಂಟೆಗಳ ಬಳಿಕ ರೋಗಿಯನ್ನು ಎಕ್ಮೋದಿಂದ ಹೊರತರಲಾಯಿತು. ಇಂಪ್ಲಾಂಟಬಲ್ ಕಾರ್ಡಿಯೋವರ್ಟರ್ ಡಿಫಿಬ್ರಿಲೇಟರ್ ಅಳವಡಿಕೆಗಾಗಿ ಅವರನ್ನು ಹೃದ್ರೋಗ ವಿಭಾಗಕ್ಕೆ ವರ್ಗಾಯಿಸಲಾಯಿತು.

ಹೃದಯ ಮತ್ತು ಎದೆಗೂಡು ಶಸ್ತ್ರಚಿಕಿತ್ಸಾ ವಿಭಾಗದ ಕನ್ಸಲ್ಟೆಂಟ್ ಡಾ.ಶ್ಯಾಮ್ ಕೆ.ಅಶೋಕ್, ಡಾ.ವಿಜಯ್ ಕುಮಾರ್, ಡಾ.ಸಾಯಿ, ಡಾ.ಗಣೇಶ್ ಕಾಮತ್ ಮತ್ತು ಡಾ. ಶುಭಂ ಅವರು ಮಣಿಪಾಲ್ ಕಾಲೇಜ್ ಆಫ್ ಹೆಲ್ತ್ ಪ್ರೊಫೆಶನ್ಸ್‌ನ ಪರ್ಫ್ಯೂಷನಿಸ್ಟ್ ಹಲೀಶ್ ಅವರು ರೋಗಿಗೆ ಚಿಕಿತ್ಸೆ ನೀಡಿದ್ದರು ಎಂದು ಮಾಹೆ ಮಣಿಪಾಲದ ಬೋಧನಾ ಆಸ್ಪತ್ರೆಗಳ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಡಾ. ಸುಧಾಕರ್ ಕಂಟಿಪುಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಯುಕ್ತ ಕರ್ನಾಟಕ

# ಹೃದಯ ಸ್ತಂಭನಕ್ಕೆ ಎಕ್ಮೋ ಚಿಕಿತ್ಸೆ

**ಸಂ.ಕ.ಸಮಾಚಾರ, ಉಡುಪಿ**

ಹಠಾತ್ ಹೃದಯ ಸ್ತಂಭನಕ್ಕೆ ಒಳಗಾಗಿ ಕುಸಿದು ಬಿದ್ದಿದ್ದ ವ್ಯಕ್ತಿಯೊಬ್ಬರಿಗೆ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಎಕ್ಮೋ ಚಿಕಿತ್ಸೆ ಮೂಲಕ ಯಾವುದೇ ನರವೈಜ್ಞಾನಿಕ ಹಾನಿಯಿಲ್ಲದೆ ಸಂಪೂರ್ಣವಾಗಿ ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಗೊಂಡಿದ್ದಾರೆ.

ಮಣಿಪಾಲದ ವ್ಯಕ್ತಿಯೋರ್ವರು ತಮ್ಮ ಮನೆಯಲ್ಲಿ ಕುಸಿದು ಬಿದ್ದಿದ್ದು, ಕೂಡಲೇ ಅವರನ್ನು ಕೆಎಂಸಿ ಆಸ್ಪತ್ರೆಗೆ ಕರೆತಂದಿದ್ದು, ಪರೀಕ್ಷಿಸಿದ ವೈದ್ಯರು ಕೂಡಲೇ ಎದೆಯ ಒತ್ತಡ ಚಿಕಿತ್ಸೆ (ಸಿಪಿಆರ್) ಆರಂಭಿಸಿ, ನಿವಾಸದಲ್ಲಿಯೇ ಇಂಟ್ಯುಬೇಷನ್ ಮಾಡಿ ತುರ್ತು ವಿಭಾಗಕ್ಕೆ ಸ್ಥಳಾಂತರಿಸಲಾಯಿತು ಹಲವು ಬಾರಿ ಡಿಫಿಬ್ರಿಲೇಟರ್ ಶಾಕ್ ನೀಡಿದ ಬಳಿಕ ಸುಮಾರು ಒಂದು ಗಂಟೆಯಲ್ಲಿ ರಕ್ತ ಪರಿಚಲನೆ ಮರಳಿತು.

ರೋಗಿ ಆಸ್ಪತ್ರೆಗೆ ದಾಖಲಾಗಿದ್ದಾಗ ಅವರ ಎರಡೂ ಶ್ವಾಸಕೋಶಗಳು ಪಲ್ಮನರಿ ಎಡಿಮಾದಿಂದ ತುಂಬಿಕೊಂಡು ರಕ್ತ ಪರಿಚಲನೆಯನ್ನು ಸ್ವತಃ ನಿಭಾಯಿಸುವ ಸ್ಥಿತಿಯಲ್ಲಿ ಹೃದಯ ಇರಲಿಲ್ಲ. ಹೃದಯ ಮತ್ತು ಶ್ವಾಸಕೋಶಗಳ ಕೆಲಸವನ್ನು ತಾನೇ ನಿರ್ವಹಿಸುವ ವೀನೋ ಆರ್ಟೀರಿಯಲ್ ಎಕ್ಮೋ ವ್ಯವಸ್ಥೆಯನ್ನು 30 ನಿಮಿಷಗಳೊಳಗಾಗಿ ನೀಡಿ 36 ಗಂಟೆಗಳ ಬಳಿಕ ಎಕ್ಮೋದಿಂದ ಹೊರತಂದು ಎಕ್ಸ್‌ಟ್ಯುಬೇಷನ್ ಮಾಡಲಾಯಿತು. ಯಾವುದೇ ನರವೈಜ್ಞಾನಿಕ ಹಾನಿ ಆಗದಿರುವುದು ಪರೀಕ್ಷೆಯಲ್ಲಿ ದೃಢಪಟ್ಟಿತು.

ಇಂಪ್ಲಾಂಟಬಲ್ ಕಾರ್ಡಿಯೋವರ್ಟರ್ ಡಿಫಿಬ್ರಿಲೇಟರ್ ಅಳವಡಿಕೆಗಾಗಿ ಅವರನ್ನು ಹೃದ್ರೋಗ ವಿಭಾಗಕ್ಕೆ ವರ್ಗಾಯಿಸಲಾಯಿತು.

ಸಿಟಿವಿಎಸ್ ವಿಭಾಗದ ಡಾ.ಶ್ಯಾಮ್ ಕೆ. ಅಶೋಕ್, ಡಾ.ವಿಜಯ್ ಕುಮಾರ್, ಡಾ.ಸಾಯಿ, ಡಾ.ಗಣೇಶ್ ಕಾಮತ್ ಮತ್ತು ಡಾ.ಶುಭಂ ಅವರು ಮಣಿಪಾಲ್ ಕಾಲೇಜ್ ಆಫ್ ಹೆಲ್ತ್ ಪ್ರೊಫೆಶನ್ಸ್‌ನ ಪರ್ಫ್ಯೂಷನಿಸ್ಟ್ ಹಲೀಶ್ ಜೊತೆ ನಿರ್ವಹಿಸಿದರು. ವೈದ್ಯರ ಸಾಧನೆಯನ್ನು ಮಾಹೆ ಮಣಿಪಾಲದ ಬೋಧನಾ ಆಸ್ಪತ್ರೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಸುಧಾಕರ್ ಕಂಟಿಪುಡಿ ಪ್ರಶಂಸಿಸಿದ್ದಾರೆ.




Mangalore Edition
Jul 19, 2026 Page No. 03
Powered by: erelego.com

**TULUNADU VARTHE**

**LINK:** https://tulunaduvarthe.com/kasturba-hospital-manipal-saves-the-life-of-a-patient-who-suffered-cardiac-arrest-by-administering-ecmo-therapy-patient-discharged-without-any-neurological-damage/

# ಹೃದಯ ಸ್ತಂಭನಕ್ಕೆ ಒಳಗಾಗಿದ್ದ ವ್ಯಕ್ತಿಗೆ ಎಕ್ಮೋ ಚಿಕಿತ್ಸೆ ನೀಡಿ ಜೀವ ಉಳಿಸಿದ ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲ; ಯಾವುದೇ ನರವೈಜ್ಞಾನಿಕ ಹಾನಿಯಿಲ್ಲದೆ ರೋಗಿಯನ್ನು ಬಿಡುಗಡೆ

By TNVOffice - July 17, 2026 0




**ಸ್ಥಳದಲ್ಲಿಯೇ ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲದ ವೈದ್ಯರಿಂದ ತಕ್ಷಣದ ಸಿಪಿಆರ್, ಬಳಿಕ 30 ನಿಮಿಷಗಳ ಒಳಗೆ ತುರ್ತು ವಿಎ ಎಕ್ಮೋ**

ಮಣಿಪಾಲ, ಜುಲೈ 17, 2026: ತಮ್ಮ ನಿವಾಸದಲ್ಲಿ ಹಠಾತ್ ಹೃದಯ ಸ್ತಂಭನಕ್ಕೆ ಒಳಗಾಗಿ ಕುಸಿದು ಬಿದ್ದಿದ್ದ ವ್ಯಕ್ತಿಯೊಬ್ಬರು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಯಾವುದೇ ನರವೈಜ್ಞಾನಿಕ ಹಾನಿಯಿಲ್ಲದೆ ಸಂಪೂರ್ಣವಾಗಿ ಗುಣಮುಖರಾಗಿದ್ದಾರೆ. ಆಸ್ಪತ್ರೆಯ ಹೊರಗೆ ಸಂಭವಿಸುವ ಹೃದಯ ಸ್ತಂಭನದ ಪ್ರಕರಣಗಳಲ್ಲಿ ಭಾರತದಲ್ಲಿ ಮರಣ ಪ್ರಮಾಣ ಶೇಕಡಾ 90ಕ್ಕೂ ಹೆಚ್ಚಿದೆ. ತಕ್ಷಣವೇ ಎದೆಗೆ ಒತ್ತಡ ನೀಡುವ ವಿಧಾನ (ಸಿ ಪಿ ಆರ್) ತಿಳಿದಿರುವವರು ಜನಸಂಖ್ಯೆಯಲ್ಲಿ ಕೇವಲ ಶೇಕಡಾ ಐದರಷ್ಟು ಮಾತ್ರ ಎಂಬುದೇ ಇದಕ್ಕೆ ಪ್ರಮುಖ ಕಾರಣ.

ಅವರು ಕುಸಿದು ಬಿದ್ದ ಸಂದರ್ಭದಲ್ಲಿ ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲದ ವೈದ್ಯರು ಆಕಸ್ಮಿಕವಾಗಿ ಅದೇ ಪರಿಸರದಲ್ಲಿದ್ದರು. ಅವರು ಕ್ಷಣಾರ್ಧದಲ್ಲಿ ಸಿಪಿಆರ್ ಆರಂಭಿಸಿ, ನಿವಾಸದಲ್ಲಿಯೇ ಇಂಟ್ಯುಬೇಷನ್ ಮಾಡಿದರು. ಅವರನ್ನು ತುರ್ತು ವಿಭಾಗಕ್ಕೆ ಸ್ಥಳಾಂತರಿಸಲಾಯಿತು, ಜೊತೆಗೆ ಆಸ್ಪತ್ರೆಗೆ ಸಾಗಿಸುವ ವೇಳೆಯೂ ಎದೆಯ ಒತ್ತಡವನ್ನು (ಸಿ ಪಿ ಆರ್) )ಮುಂದುವರಿಸಿದರು. ಹಲವು ಬಾರಿ ಡಿಫಿಬ್ರಿಲೇಟರ್ ಶಾಕ್ ನೀಡಿದ ಬಳಿಕ, ಸುಮಾರು ಒಂದು ಗಂಟೆಯ ಕೊನೆಗೆ ರಕ್ತ ಪರಿಚಲನೆ ಮರಳಿತು.

ಎರಡೂ ಶ್ವಾಸಕೋಶಗಳು ಪಲ್ಮನರಿ ಎಡಿಮಾದಿಂದ ತುಂಬಿಕೊಂಡಿತ್ತು ಮತ್ತು ಹೃದಯವು ರಕ್ತ ಪರಿಚಲನೆಯನ್ನು ಸ್ವತಃ ನಿಭಾಯಿಸುವ ಸ್ಥಿತಿಯಲ್ಲಿರಲಿಲ್ಲ. ಹೃದಯ ಮತ್ತು ಶ್ವಾಸಕೋಶಗಳ ಕೆಲಸವನ್ನು ತಾನೇ ನಿರ್ವಹಿಸುವ ವೀನೋ ಆರ್ಟೀರಿಯಲ್ ಎಕ್ಮೋ ವ್ಯವಸ್ಥೆಯನ್ನು 30 ನಿಮಿಷಗಳ ಒಳಗಾಗಿ ಹೃದಯ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಹೃದಯ ಮತ್ತು ಎದೆಗೂಡು ಶಸ್ತ್ರಚಿಕಿತ್ಸಾ ವಿಭಾಗವು ಅಳವಡಿಸಿತು. 36 ಗಂಟೆಗಳ ಬಳಿಕ ಅವರನ್ನು ಎಕ್ಮೋದಿಂದ ಹೊರತರಲಾಯಿತು, ಎಕ್ಸ್ಟ್ಯುಬೇಷನ್ ಮಾಡಲಾಯಿತು ಮತ್ತು ಯಾವುದೇ ನರವೈಜ್ಞಾನಿಕ ಹಾನಿ ಆಗದಿರುವುದು ಪರೀಕ್ಷೆಯಲ್ಲಿ ದೃಢಪಟ್ಟಿತು. ಇಂಪ್ಲಾಂಟಬಲ್ ಕಾರ್ಡಿಯೋವರ್ಟರ್ ಡಿಫಿಬ್ರಿಲೇಟರ್ ಅಳವಡಿಕೆಗಾಗಿ ಅವರನ್ನು ಹೃದ್ರೋಗ ವಿಭಾಗಕ್ಕೆ ವರ್ಗಾಯಿಸಲಾಯಿತು .

**UDAYAVANI.COM**

**LINK:** https://uvnews.in/0dulwrz

KARNATAKA JUL 17, 2026, 4:28 PM IST

## Kasturba Hospital, Manipal brings back man from cardiac arrest with ECMO support

Immediate CPR at the scene by doctors, followed by emergency VA ECMO within 30 minutes; patient discharged without neurological damage




Manipal: A man who collapsed at his residence with a sudden cardiac arrest has made a complete recovery with no neurological deficit at Kasturba Hospital, Manipal. Out of hospital cardiac arrest carries a mortality of over 90 per cent in India, where only about five per cent of the population knows how to begin chest compressions immediately.

Doctors from Kasturba Hospital, Manipal happened to be in the neighbourhood when he collapsed. They began cardiopulmonary resuscitation within seconds and intubated him at the residence. He was shifted to the emergency department with compressions continuing, and after multiple defibrillator shocks, circulation returned at the end of nearly an hour.

Both lungs were flooded with pulmonary oedema, and the heart could not sustain circulation. The cardiovascular and thoracic surgery department established him on veno arterial ECMO, which takes over the work of the heart and lungs, in the cardiothoracic operation theatre within 30 minutes of the request. He was weaned off after 36 hours, extubated, and found to have no neurological deficit. He has been transferred to cardiology for an implantable cardioverter defibrillator.

**DHRISHYA NEWS**

**LINK**: https://www.dhrishyanews.com/?p=36930

# ಹೃದಯ ಸ್ತಂಭನಕ್ಕೆ ಒಳಗಾಗಿದ್ದ ವ್ಯಕ್ತಿಗೆ ಎಕ್ಮೋ ಚಿಕಿತ್ಸೆ ನೀಡಿ ಜೀವ ಉಳಿಸಿದ ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲ; ಯಾವುದೇ ನರವೈಜ್ಞಾನಿಕ ಹಾನಿಯಿಲ್ಲದೆ ರೋಗಿಯನ್ನು ಬಿಡುಗಡೆ

ಸ್ಥಳದಲ್ಲಿಯೇ ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲದ ವೈದ್ಯರಿಂದ ತಕ್ಷಣದ ಸಿಪಿಆರ್, ಬಳಿಕ 30 ನಿಮಿಷಗಳ ಒಳಗೆ ತುರ್ತು ವಿಎ ಎಕ್ಮೋ

by Dhrishya News — 17/07/2026 in ಸುದ್ದಿಗಳು 0



0 SHARES 40 VIEWS

ಮಣಿಪಾಲ, ಜುಲೈ 17, 2026: ತಮ್ಮ ನಿವಾಸದಲ್ಲಿ ಹಠಾತ್ ಹೃದಯ ಸ್ತಂಭನಕ್ಕೆ ಒಳಗಾಗಿ ಕುಸಿದು ಬಿದ್ದಿದ್ದ ವ್ಯಕ್ತಿಯೊಬ್ಬರು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಯಾವುದೇ ನರವೈಜ್ಞಾನಿಕ ಹಾನಿಯಿಲ್ಲದೆ ಸಂಪೂರ್ಣವಾಗಿ ಗುಣಮುಖರಾಗಿದ್ದಾರೆ. ಆಸ್ಪತ್ರೆಯ ಹೊರಗೆ ಸಂಭವಿಸುವ ಹೃದಯ ಸ್ತಂಭನದ ಪ್ರಕರಣಗಳಲ್ಲಿ ಭಾರತದಲ್ಲಿ ಮರಣ ಪ್ರಮಾಣ ಶೇಕಡಾ 90ಕ್ಕೂ ಹೆಚ್ಚಿದೆ. ತಕ್ಷಣವೇ ಎದೆಗೆ ಒತ್ತಡ ನೀಡುವ ವಿಧಾನ (ಸಿ ಪಿ ಆರ್) ತಿಳಿದಿರುವವರು ಜನಸಂಖ್ಯೆಯಲ್ಲಿ ಕೇವಲ ಶೇಕಡಾ ಐದರಷ್ಟು ಮಾತ್ರ ಎಂಬುದೇ ಇದಕ್ಕೆ ಪ್ರಮುಖ ಕಾರಣ.

ಅವರು ಕುಸಿದು ಬಿದ್ದ ಸಂದರ್ಭದಲ್ಲಿ ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲದ ವೈದ್ಯರು ಆಕಸ್ಮಿಕವಾಗಿ ಅದೇ ಪರಿಸರದಲ್ಲಿದ್ದರು. ಅವರು ಕ್ಷಣಾರ್ಧದಲ್ಲಿ ಸಿಪಿಆರ್ ಆರಂಭಿಸಿ, ನಿವಾಸದಲ್ಲಿಯೇ ಇಂಟ್ಯುಬೇಷನ್ ಮಾಡಿದರು. ಅವರನ್ನು ತುರ್ತು ವಿಭಾಗಕ್ಕೆ ಸ್ಥಳಾಂತರಿಸಲಾಯಿತು, ಜೊತೆಗೆ ಆಸ್ಪತ್ರೆಗೆ ಸಾಗಿಸುವ ವೇಳೆಯೂ ಎದೆಯ ಒತ್ತಡವನ್ನು (ಸಿ ಪಿ ಆರ್) ಮುಂದುವರಿಸಿದರು. ಹಲವು ಬಾರಿ ಡಿಫಿಬ್ರಿಲೇಟರ್ ಶಾಕ್ ನೀಡಿದ ಬಳಿಕ, ಸುಮಾರು ಒಂದು ಗಂಟೆಯ ಕೊನೆಗೆ ರಕ್ತ ಪರಿಚಲನೆ ಮರಳಿತು.

**NAMMA UDUPI BULLETIN**

**LINK:** https://nammaudupibulletin.com/suddigalu/pradeshika/reg-news-udupi-8218/






# ಹೃದಯ ಸ್ತಂಭನಕ್ಕೆ ಒಳಗಾಗಿದ್ದ ವ್ಯಕ್ತಿಗೆ ಎಕ್ಮೋ ಚಿಕಿತ್ಸೆ ನೀಡಿ ಜೀವ ಉಳಿಸಿದ ಕಸ್ತೂರ್ಬಾ ಆಸ್ಪತ್ರೆ

By: Udupi Bulletin News Desk | Date: July 17, 2026

**ಮಣಿಪಾಲ, ಜು.17:** ತಮ್ಮ ನಿವಾಸದಲ್ಲಿ ಹಠಾತ್ ಹೃದಯ ಸ್ತಂಭನಕ್ಕೆ ಒಳಗಾಗಿ ಕುಸಿದು ಬಿದ್ದಿದ್ದ ವ್ಯಕ್ತಿಯೊಬ್ಬರು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಯಾವುದೇ ನರವೈಜ್ಞಾನಿಕ ಹಾನಿಯಿಲ್ಲದೆ ಸಂಪೂರ್ಣವಾಗಿ ಗುಣಮುಖರಾಗಿದ್ದಾರೆ. ಆಸ್ಪತ್ರೆಯ ಹೊರಗೆ ಸಂಭವಿಸುವ ಹೃದಯ ಸ್ತಂಭನದ ಪ್ರಕರಣಗಳಲ್ಲಿ ಭಾರತದಲ್ಲಿ ಮರಣ ಪ್ರಮಾಣ ಶೇಕಡಾ 90ಕ್ಕೂ ಹೆಚ್ಚಿದೆ. ತಕ್ಷಣವೇ ಎದೆಗೆ ಒತ್ತಡ ನೀಡುವ ವಿಧಾನ (ಸಿ ಪಿ ಆರ್) ತಿಳಿದಿರುವವರು ಜನಸಂಖ್ಯೆಯಲ್ಲಿ ಕೇವಲ ಶೇಕಡಾ ಐದರಷ್ಟು ಮಾತ್ರ ಎಂಬುದೇ ಇದಕ್ಕೆ ಪ್ರಮುಖ ಕಾರಣ.

ಅವರು ಕುಸಿದು ಬಿದ್ದ ಸಂದರ್ಭದಲ್ಲಿ ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲದ ವೈದ್ಯರು ಆಕಸ್ಮಿಕವಾಗಿ ಅದೇ ಪರಿಸರದಲ್ಲಿದ್ದರು. ಅವರು ಕ್ಷಣಾರ್ಧದಲ್ಲಿ ಸಿಪಿಆರ್ ಆರಂಭಿಸಿ, ನಿವಾಸದಲ್ಲಿಯೇ ಇಂಟ್ಯುಬೇಷನ್ ಮಾಡಿದರು. ಅವರನ್ನು ತುರ್ತು ವಿಭಾಗಕ್ಕೆ ಸ್ಥಳಾಂತರಿಸಲಾಯಿತು, ಜೊತೆಗೆ ಆಸ್ಪತ್ರೆಗೆ ಸಾಗಿಸುವ ವೇಳೆಯೂ ಎದೆಯ ಒತ್ತಡವನ್ನು (ಸಿ ಪಿ ಆರ್) )ಮುಂದುವರಿಸಿದರು. ಹಲವು ಬಾರಿ ಡಿಫಿಬ್ರಿಲೇಟರ್ ಶಾಕ್ ನೀಡಿದ ಬಳಿಕ, ಸುಮಾರು ಒಂದು ಗಂಟೆಯ ಕೊನೆಗೆ ರಕ್ತ ಪರಿಚಲನೆ ಮರಳಿತು.

ಎರಡೂ ಶ್ವಾಸಕೋಶಗಳು ಪಲ್ಮನರಿ ಎಡಿಮಾದಿಂದ ತುಂಬಿಕೊಂಡಿತ್ತು ಮತ್ತು ಹೃದಯವು ರಕ್ತ ಪರಿಚಲನೆಯನ್ನು ಸ್ವತಃ ನಿಭಾಯಿಸುವ ಸ್ಥಿತಿಯಲ್ಲಿರಲಿಲ್ಲ. ಹೃದಯ ಮತ್ತು ಶ್ವಾಸಕೋಶಗಳ ಕೆಲಸವನ್ನು ತಾನೇ ನಿರ್ವಹಿಸುವ ವೀನೋ ಆರ್ಟೀರಿಯಲ್ ಎಕ್ಮೋ ವ್ಯವಸ್ಥೆಯನ್ನು 30 ನಿಮಿಷಗಳ ಒಳಗಾಗಿ ಹೃದಯ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಹೃದಯ ಮತ್ತು ಎದೆಗೂಡು ಶಸ್ತ್ರಚಿಕಿತ್ಸಾ ವಿಭಾಗವು ಅಳವಡಿಸಿತು. 36 ಗಂಟೆಗಳ ಬಳಿಕ ಅವರನ್ನು ಎಕ್ಮೋದಿಂದ ಹೊರತರಲಾಯಿತು, ಎಕ್ಸ್ಟ್ಯುಬೇಷನ್ ಮಾಡಲಾಯಿತು ಮತ್ತು ಯಾವುದೇ ನರವೈಜ್ಞಾನಿಕ ಹಾನಿ ಆಗದಿರುವುದು ಪರೀಕ್ಷೆಯಲ್ಲಿ ದೃಢಪಟ್ಟಿತು. ಇಂಪ್ಲಾಂಟಬಲ್ ಕಾರ್ಡಿಯೋವರ್ಟರ್ ಡಿಫಿಬ್ರಿಲೇಟರ್ ಅಳವಡಿಕೆಗಾಗಿ ಅವರನ್ನು ಹೃದ್ರೋಗ ವಿಭಾಗಕ್ಕೆ ವರ್ಗಾಯಿಸಲಾಯಿತು .

**DAIJIWORLD.COM**

**LINK:** https://share.google/EwFVi62wSi8hCbSNQ

# Kasturba Hospital, Manipal brings back man from cardiac arrest with ECMO support

Fri, Jul 17 2026 10:05:56 PM

Ads by Google
Send feedback
Why this ad?

*Media Release*

**Udupi, Jul 17:** A man who collapsed at his residence with a sudden cardiac arrest has made a complete recovery with no neurological deficit at Kasturba Hospital, Manipal. Out of hospital cardiac arrest carries a mortality of over 90 per cent in India, where only about five per cent of the population knows how to begin chest compressions immediately.

Doctors from Kasturba Hospital, Manipal, happened to be in the neighbourhood when he collapsed. They began cardiopulmonary resuscitation within seconds and intubated him at the residence. He was shifted to the emergency department with compressions continuing, and after multiple defibrillator shocks, circulation returned at the end of nearly an hour.




Both lungs were flooded with pulmonary oedema, and the heart could not sustain circulation. The cardiovascular and thoracic surgery department established him on veno-arterial ECMO, which takes over the work of the heart and lungs, in the cardiothoracic operation theatre within 30 minutes of the request. He was weaned off after 36 hours, extubated, and found to have no neurological deficit. He has been transferred to cardiology for an implantable cardioverter defibrillator.

**KEMMANNU.COM**

**LINK:** https://share.google/3lcaqP1DdWiHBUBsm

Manipal, July 17, 2026: A man who collapsed at his residence with a sudden cardiac arrest has made a complete recovery with no neurological deficit at Kasturba Hospital, Manipal. Out of hospital cardiac arrest carries a mortality of over 90 per cent in India, where only about five per cent of the population knows how to begin chest compressions immediately.




Doctors from Kasturba Hospital, Manipal happened to be in the neighbourhood when he collapsed. They began cardiopulmonary resuscitation within seconds and intubated him at the residence. He was shifted to the emergency department with compressions continuing, and after multiple defibrillator shocks, circulation returned at the end of nearly an hour.

Both lungs were flooded with pulmonary oedema, and the heart could not sustain circulation. The cardiovascular and thoracic surgery department established him on veno arterial ECMO, which takes over the work of the heart and lungs, in the cardiothoracic operation theatre within 30 minutes of the request. He was weaned off after 36 hours, extubated, and found to have no neurological deficit. He has been transferred to cardiology for an implantable cardioverter defibrillator.

Dr Shyam K Ashok, Consultant, Department of Cardiovascular and Thoracic Surgery, said "Everything came down to time. The compressions that started within seconds of the collapse are the reason this gentleman is with his family today without any brain injury. We could get him on the circuit inside 30 minutes because the theatre, the circuit and the teams are kept ready around the clock."